**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

**ಸಂಖ್ಯೆ: ಕಾಶಿಇ/260/ಪಿಹೆಚ್‌ಡಿ/ಎಂಫಿಲ್/2016-17/ಸೇವಿ-1**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:14-03-2018

**ಇವರಿಗೆ**

ಇಲಾಖಾ ವ್ಯಾಪ್ತಿಯ ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ
ಪ್ರಾಂಶುಪಾಲರುಗಳಿಗೆ.

**ಮಾನ್ಯರೆ.**

**ವಿಷಯ:** ಪಿಹೆಚ್‌ಡಿ/ಎಂ.ಫಿಲ್ ಪದವಿ ಪಡೆದ ಬೋಧಕರುಗಳಿಗೆ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ:ಇಡಿ/195/ಡಿಸಿಇ 2014, ದಿನಾಂಕ:28.04.2017

****

ಸೂಚಿತ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋದಕರುಗಳಿಗೆ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿ ಮಂಜೂರಾತಿ ಸಂಬಂಧ ಈಗಾಗಲೇ ಸ್ವೀಕೃತವಾದ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿ, ಪಿ.ಹೆಚ್.ಡಿ ಪದವಿಗೆ ಸೇವಾ ಅವಧಿಯಲ್ಲಿ ಸ್ಥಾನೀಕರಣಕ್ಕೆ/ ಎ.ಜಿ.ಪಿಗೆ ವಿನಾಯಿತಿ ಪಡೆದಿರುವ ಬೋಧಕರು ಪಿ.ಹೆಚ್.ಡಿ ಪದವಿ ಮುಂಗಡ ವೇತನ ಬಡ್ತಿಗೆ ಪ್ರಸ್ತಾವನೆ ಸಲ್ಲಿಸುತ್ತಿರುವ ಪ್ರಕರಣಗಳು ಕಂಡುಬಂದಿದ್ದು ನಿಯಮದಡಿಯಲ್ಲಿ ಯಾವುದಾದರು ಒಂದು ಸೌಲಭ್ಯ ಪಡೆಯಲು ಅವಕಾಶವಿರುತ್ತದೆ. ಆದುದರಿಂದ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಿರುವ ಬೋಧಕರು ಸ್ಥಾನೀಕರಣ/ಎ.ಜಿ.ಪಿ ಮಂಜೂರಾತಿಯಲ್ಲಿ ಪಿ.ಹೆಚ್.ಡಿ ಪದವಿಗೆ ಸೇವಾ ವಿನಾಯಿತಿ ಪಡೆದಿದ್ದಾರೆಯೇ? ಎಂಬ ಬಗ್ಗೆ ಈ ಪತ್ರದೊಂದಿಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನಲ್ಲಿ ದೃಢೀಕೃತ ಮಾಹಿತಿಯನ್ನು ಕೋರಲಾಗಿದ್ದು, ಮಾಹಿತಿಯ ಸಾಫ್ಟ್-ಕಾಪಿಯನ್ನು dceservice1@gmail.comಗೆ ಕಳುಹಿಸಲು ಹಾಗೂ ಹಾರ್ಡ್ ಕಾಪಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ ಹಾಗೂ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿ ಮಂಜೂರಾತಿಗಾಗಿ ಸಲ್ಲಿಸುತ್ತಿರುವ ಪ್ರಸ್ತಾವನೆಗಳನ್ನು ಪರಿಶೀಲಿಸುವ ಸಂದರ್ಭ ಅನೇಕ ಪ್ರಾಂಶುಪಾಲರುಗಳು ಸ್ಪಷ್ಟ ಮಾಹಿತಿ ನೀಡದಿರುವುದು ಕಂಡುಬಂದಿದ್ದು ಸರಿಯಾದ ಮಾಹಿತಿಯನ್ನು ನೀಡಲು ಸೂಚಿಸಿದೆ. ಸ್ಪಷ್ಟ ಮಾಹಿತಿ ನೀಡದಿದ್ದಲ್ಲಿ ತಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

**ತಮ್ಮ ವಿಶ್ವಾಸಿ**

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

260-Phd Mphil Advance increment

**ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಲು ಪ್ರಾಂಶುಪಾಲರಿಂದ ಈ ಕೆಳಕಂಡಂತೆ ದೃಢೀಕರಣ ಸಲ್ಲಿಸುವುದು**

| | | |
|---|---|---|
| 1 | ಹೆಸರು | |
| 2 | ಕಾಲೇಜಿನ ಹೆಸರು | |
| 3 | ವಿಷಯ | |
| 4 | ನೇಮಕಾತಿ ದಿನಾಂಕ | |
| 5 | ನೇಮಕಾತಿಗೆ ಪರಿಗಣಿಸಲಾದ ವಿದ್ಯಾರ್ಹತೆ | |
| 6 | ಪಿ.ಹೆಚ್.ಡಿ ಪದವಿ ಪಡೆದ ದಿನಾಂಕ | |
| 7 | ಪಿ.ಹೆಚ್.ಡಿ ಪದವಿಗೆ ಸೇವಾ ಅವಧಿಯಲ್ಲಿ ಸ್ಥಾನೀಕರಣಕ್ಕೆ/ಎ.ಜಿ.ಪಿಗೆ ಸೇವಾ ವಿನಾಯಿತಿ ಪಡೆಯಲಾಗಿದೆಯೇ? | |

**ಪ್ರಾಂಶುಪಾಲರು**

**<u>ಸೂಚನೆ:</u>**

1. ಈಗಾಗಲೇ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳಿಗೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಪ್ರಸ್ತಾವನೆಯ ಉಲ್ಲೇಖದೊಂದಿಗೆ ಮೇಲ್ಕಂಡ ಮಾಹಿತಿಯನ್ನು ನೀಡಲು ಸೂಚಿಸಿದೆ.
2. ಮುಂದೆ ಸಲ್ಲಿಸುವ ಪ್ರಸ್ತಾವನೆಗಳಲ್ಲಿ ನಿಗದಿತ ಚೆಕ್‌ಲಿಸ್ಟ್ ಹಾಗೂ ಮೇಲ್ಕಂಡ ಮಾಹಿತಿಯನ್ನು ದೃಢೀಕರಿಸಿ ಸಲ್ಲಿಸಲು ಸೂಚಿಸಿದೆ.